<u>**ಕರ್ನಾಟಕ ವಿಧಾನ ಪರಿಷತ್ತು**</u>

1. **ಸದಸ್ಯರ ಹೆಸರು:** ಶ್ರೀಮತಿ ಹೇಮಲತಾ ನಾಯಕ್
2. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** 1046
3. **ಉತ್ತರಿಸಬೇಕಾದ ದಿನಾಂಕ:** 23-02-2024

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದೇವದುರ್ಗ ತಾಲ್ಲೂಕಿನಲ್ಲಿ ನರೇಗಾ ಯೋಜನೆ ಅನುಷ್ಠಾನದಲ್ಲಿ ಅವ್ಯವಹಾರವಾಗಿರುವ ಹಿನ್ನಲೆಯಲ್ಲಿ ತನಿಖೆ ಮಾಡಲಾಗಿದೆಯೇ ಹಾಗಿದ್ದಲ್ಲಿ, ವರದಿ ನೀಡುವುದು; | ಹೌದು<br>ದೇವದುರ್ಗ ತಾಲ್ಲೂಕಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2020-21ನೇ ರಿಂದ 2022-23ನೇ ಸಾಲುಗಳಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆದಿರುವ ದೂರಿನ ಬಗ್ಗೆ ವಿಶೇಷ ಸಾಮಾಜಿಕ ಪರಿಶೋಧನೆ ನಡೆಸಲು ಸಾಮಾಜಿಕ ಪರಿಶೋಧನಾ ನಿರ್ದೇಶಕರಿಗೆ ಆದೇಶಿಸಲಾಗಿತ್ತು. ವಿಶೇಷ ಸಾಮಾಜಿಕ ಪರಿಶೋಧನೆಯನ್ನು ನಡೆಸಿ ದಿನಾಂಕ:20.01.2024 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಅಂತಿಮ ವರದಿಯನ್ನು **ಅನುಬಂಧ-1ರಲ್ಲಿ** ಲಗತ್ತಿಸಲಾಗಿದೆ |
| ಆ) | ಪಂಚಾಯತ್ ಮಟ್ಟದಲ್ಲಿ ಗುತ್ತಿಗೆ/ಹೊರಗುತ್ತಿಗೆ ನೌಕರರ ಸೇವೆಯಲ್ಲಿ ಜವಬ್ದಾರಿಗಳನ್ನು ನಿಗದಿಗೊಳಿಸಲಾಗಿದೆಯೇ; ಹೊರಗುತ್ತಿಗೆ ನೌಕರರ ಮೇಲೆ ಕ್ರಮ ಜರುಗಿಸಲಾಗಿದೆಯೇ; ಯಾವ ಮಾನದಂಡದಡಿಯಲ್ಲಿ ಕ್ರಮ ಜರುಗಿಸಲಾಗಿದೆ; | ನರೇಗಾ ಯೋಜನೆಯಡಿಯಲ್ಲಿ ಗುತ್ತಿಗೆ/ ಹೊರಗುತ್ತಿಗೆ ನೌಕರರ ಜವಾಬ್ದಾರಿಗಳನ್ನು ನಿಗದಿಗೊಳಿಸಿದೆ. ವಿಶೇಷ ಸಾಮಾಜಿಕ ಪರಿಶೋಧನಾ ವರದಿಯನ್ವಾಧರಿಸಿ ನರೇಗಾ ಯೋಜನೆಯ ಅನುಷ್ಠಾನದಲ್ಲಿ ತೊಡಗಿರುವ ಹೊರಗುತ್ತಿಗೆ ಸಿಬ್ಬಂದಿಗಳಾದ ತಾಲ್ಲೂಕು MIS ಸಂಯೋಜಕರು, ತಾಂತ್ರಿಕ ಸಂಯೋಜಕರು, ಗ್ರಾಮ ಕಾಯಕ ಮಿತ್ರ, ಮತ್ತು ಇತರ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಆಡಿಟ್ ಆಫ್ ಸ್ಕೀಮ್ ನಿಯಮಗಳು-2011 ನಿಯಮ-7(3)(ಸಿ)(ಎಫ್) ರಡಿಯಲ್ಲಿ ಜಿಲ್ಲಾ ಪಂಚಾಯಿತಿಯಿಂದ ನೋಟೀಸು ನೀಡಲಾಗಿದ್ದು, ಹೇಳಿಕೆಗಳು ಸ್ವೀಕೃತವಾದ ನಂತರ, ಪರಿಶೀಲಿಸಿ ನರೇಗಾ ಯೋಜನೆಯ ಮಾರ್ಗ ಸೂಚಿಗಳನ್ವಯ ಮುಂದಿನ ಸೂಕ್ತ ಕ್ರಮವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಜರುಗಿಸುತ್ತಾರೆ |
| ಇ) | ಸದರಿ ಅವ್ಯವಹಾರದಲ್ಲಿ ಭಾಗಿದಾರರಾದ ಉನ್ನತ ಮಟ್ಟದ ಅಧಿಕಾರಗಳ ಮೇಲೆ ಕ್ರಮ | ವಿಶೇಷ ಸಾಮಾಜಿಕ ಪರಿಶೋಧನಾ ವರದಿಯನ್ವಯ ದೇವದುರ್ಗ ತಾಲ್ಲೂಕಿನ 25 ಪಂಚಾಯತ್ ಅಭಿವೃದ್ಧಿ **ಅಧಿಕಾರಿಗಳನ್ನು** ಸೇವೆಯಿಂದ **ಅಮಾನತ್ತುಗೊಳಿಸಲಾಗಿದೆ.** |

| | | |
|---|---|---|
| | ಜರುಗಿಸಲಾಗಿದೆಯೇ: ಹಾಗಿದ್ದಲ್ಲಿ, ವಿವರ ನೀಡುವುದು: | ದೇವದುರ್ಗ ತಾಲ್ಲೂಕಿನ ನರೇಗಾ ಯೋಜನೆಯ ತಾಲ್ಲೂಕು ಕಾರ್ಯಕ್ರಮಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಮತ್ತು ಸಹಾಯಕ ನಿರ್ದೇಶಕರು (ಗ್ರಾಉ) ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ ಹಾಗೂ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ಅನುಷ್ಠಾನ ಇಲಾಖೆಯ ಅಧಿಕಾರಿಗಳಾದ ತೋಟಗಾರಿಕಾ ಉಪ ನಿರ್ದೇಶಕರು, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಉಪ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಇಲಾಖೆ, ಉಪ ನಿರ್ದೇಶಕರು ರೇಷ್ಮೆ ಇಲಾಖೆ, ಜಂಟಿ ಕೃಷಿ ನಿರ್ದೇಶಕರು ಇವರುಗಳಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದೆ. |
| ಈ) | ಕೆಳಹಂತದ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಉನ್ನತ ಮಟ್ಟದ ಅಧಿಕಾರಿಗಳನ್ನು ರಕ್ಷಿಸುವ ಕೆಲಸ ಮಾಡಲಾಗುತ್ತಿದೆ ಎಂಬ ದೂರು ಬಂದಿದೆಯೇ: ಬಂದಿದ್ದಲ್ಲಿ. ಕೈಗೊಂಡ ಕ್ರಮದ ಕುರಿತು ವಿವರ ನೀಡುವುದು | ಕರ್ನಾಟಕ ರಾಜ್ಯ ಮಹಾತ್ಮಗಾಂಧಿ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ), ರಾಯಚೂರು ಇವರಿಂದ ಸ್ವೀಕೃತವಾದ ಮನವಿಯಲ್ಲಿ ಜಿಲ್ಲಾ ಪಂಚಾಯತ್ & ತಾಲ್ಲೂಕು ಪಂಚಾಯಿತಿಗಳ ಕಾರ್ಯಕ್ರಮಾಧಿಕಾರಿಗಳು ಮತ್ತು ಇತರರು ಮೇಲ್ವಿಚಾರಣೆ ಮಾಡುವಲ್ಲಿ ವಿಫಲರಾಗಿರುತ್ತಾರೆಂದು ಹಾಗೂ ಅನುಷ್ಠಾನ ಇಲಾಖೆಯಿಂದ ನಿಯಮಾನುಸಾರ ಕಾಮಗಾರಿಯನ್ನು ಮಾಡದೆ ಇದ್ದರೂ ಸಹ ಸದರಿ ಇಲಾಖಾಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿದ್ದಾರೆ.<br>ವಿಶೇಷ ಸಾಮಾಜಿಕ ಪರಿಶೋಧನೆಯ ಅಂತಿಮ ವರದಿಯನ್ನಾಧರಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಉ) | ಅವ್ಯವಹಾರದಲ್ಲಿ ಭಾಗಿಯಾದ ಏಜೆನ್ಸಿ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ: (ವಿವರ ನೀಡುವುದು) | ವಿಶೇಷ ಸಾಮಾಜಿಕ ಪರಿಶೋಧನಾ ವರದಿಯಂತೆ ಅವ್ಯವಹಾರದಲ್ಲಿ ಭಾಗಿಯಾದ ಮಾರುತೇಶ್ವರ ಟ್ರೇಡರ್ಸ್, ದೇವದುರ್ಗ ಇವರ ಏಜೆನ್ಸಿಗೆ ಹಣ ಪಾವತಿಯಾಗದಂತೆ ಎಂ.ಐ.ಎಸ್ ತಂತ್ರಾಂಶದಲ್ಲಿ ಕ್ರಮವಹಿಸಲಾಗಿದೆ. ಏಜೆನ್ಸಿಯವರು ಸಾಮಗ್ರಿಗಳನ್ನು ಸರಬರಾಜು ಮಾಡದೆ ಭೋಗಸ್ ಬಿಲ್ಲಿನಿಂದ ಹಣ ಪಾವತಿಯಾಗಿದ್ದಲ್ಲಿ ಏಜೆನ್ಸಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದಲ್ಲದೇ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು |

| | | |
|---|---|---|
| ಊ) | ಸದರಿ ಅವ್ಯವಹಾರದ ಆರ್ಥಿಕ ಮೊತ್ತವೆಷ್ಟು; ಭಾರಿ ಮೊತ್ತದ ಪ್ರಕರಣವಾದುದರಿಂದ ಆಳವಾಗಿ ತನಿಖೆ ಮಾಡಲು ಸಿಓಡಿ/ಸಿಬಿಐಗೆ ವಹಿಸಲು ಸರ್ಕಾರ ಮುಂದಾಗುವುದೇ; ಹಾಗಿದ್ದಲ್ಲಿ, ಯಾವಾಗ ಕ್ರಮ ಜರುಗಿಸಲಾಗುವುದು? | • ವಿಶೇಷ ಸಾಮಾಜಿಕ ಪರಿಶೋಧನಾ ವರದಿಯನ್ವಯ:- ದುರುಪಯೋಗದ ಮೊತ್ತ:-6259 ಪ್ರಕರಣಗಳಿಂದ ರೂ.11,28,80,083/-<br>• ವಿವಿಧ ಲೋಪದೋಷಗಳಿಂದ ಹಣ ಕಾಸಿನ ವಿಚಲನ 52720 ಪ್ರಕರಣಗಳಿಂದ ರೂ.331,01,82,351/-<br>• ಪ್ರಕ್ರಿಯೆ ಉಲ್ಲಂಘನೆ - ನಿರುದ್ಯೋಗ ಭತ್ಯೆ ನೀಡದ ಇರುವ 1039 ಪ್ರಕರಣಗಳಿಂದ ರೂ.15,35,953/-<br>• ಕೂಲಿ ಪಾವತಿಗೆ ಸಂಬಂಧಿಸಿದ 2547 ಪ್ರಕರಣಗಳಲ್ಲಿ ರೂ.45,058.<br>• ವಿಶೇಷ ಸಾಮಾಜಿಕ ಪರಿಶೋಧನೆಗೆ 10610 ಕಾಮಗಾರಿಗಳ ಕಡತಗಳನ್ನು ಒದಗಿಸದೇ ಇರುವುದು - ಭರಿಸಿದ ವೆಚ್ಚ ರೂ.50,13,20,990/-<br>• ನಿಯಮ ಉಲ್ಲಂಘಿಸಿ 34,247 ಕಾಮಗಾರಿಗಳ ಸಾಮಗ್ರಿ ಖರೀದಿಗೆ ಪಾವತಿಸಿರುವ ಮೊತ್ತ ರೂ.154,95,04,633/-<br>ಕಾಮಗಾರಿಗಳ ಗುಣಮಟ್ಟ ಪರಿಶೀಲನೆಯನ್ನು ತಾಂತ್ರಿಕ ಅಧಿಕಾರಿಗಳಿಂದ ನಡೆಸಲು ಸಾಮಾಜಿಕ ಪರಿಶೋಧನಾ ನಿರ್ದೇಶಕರು ಅಂತಿಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದು, ಈ ಕ್ರಮ ವಹಿಸಲಾಗುತ್ತಿದ್ದು, ಮತ್ತೊಮ್ಮೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲಾಗುವುದು.<br><br>ಸಾಮಾಜಿಕ ಪರಿಶೋಧನಾ ನಿರ್ದೇಶಕರು ನಿಯಮಗಳನ್ವಯ ಪೂರ್ಣ ಪ್ರಮಾಣದಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಿರುವುದರಿಂದ ಪ್ರಕರಣವನ್ನು ಸಿಓಡಿ/ಸಿಬಿಐ ಗೆ ವಹಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ಗ್ರಾಅಪ/81(15)/ಉಖಾಯೋ/2024**

(ಪ್ರಿಯಾಂಕ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು